**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ-682/20

Cw-3Pw-1

| | |
|---|---|
| ಹೆಸರು | ಶ್ರೀಶೈಲ ತಂದೆ ಶಿವಪ್ಪಾ ಪೂಜಾರಿ |
| ವಯಸ್ಸು | 48 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಕಾಜಿಬಿಳಗಿ |

ದಿನಾಂಕಃ 04-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ಸುಮಾರು 02-03 ವರ್ಷಗಳ ಹಿಂದೆ ಸಾವಳಗಿ ಠಾಣೆಯಲ್ಲಿ ಪೋಲಿಸರು ಠಾಣೆಗೆ ಕರೆದು ಒಂದು ದಾಖಲೆಯ ಮೇಲೆ ಸಹಿ ಮಾಡು ಅಂತಾ ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ . ಈಗ ಸಾಕ್ಷಿಗೆ ಪಂಚನಾಮೆಗೆ ತೋರಿಸಲಾಗಿ ಸಹಿ ಗುರುತಿಸಿದ್ದು ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು . ಆರೋಪಿತತನ್ನು ನೋಡಿರುವದಿಲ್ಲ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡು ಪಂಚನಾಮೆ ಮಾಡಿರುವದಿಲ್ಲ . ನಿಪಿ-1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ .

***ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಮಾನ್ಯ ಸಸಅ ರವರ ಕೋರಿಕೆ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.***

**ಪಾಟೀ ಸವಾಲುಃ ಮಾನ್ಯ ಎಪಿಪಿ ವರಿಂದ-**

ದಿನಾಂಕಃ 02-04-2020 ರಂದು ಸಾವಳಗಿ ಠಾಣಾ ಪೋಲಿಸರು ಪಂಚನಾಮೆಗಾಗಿ ಗೋಠೆ ಗ್ರಾಮದ ಪಂಚಾಯಿತಿ ಹತ್ತಿರ ಇದ್ದ ಕುಮಟೆ ರಸ್ತೆಯ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ರವಿ ಸಾಳುಂಖೆ ಎಂಬುವವನು ಅಕ್ರಮವಾಗಿ ಕಳ್ಳಬಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದ ಆತನ ಮೇಲೆ ದಾಳಿ ಮಾಡಿ ಆತನ ಹತ್ತಿರ ಇದ್ದ 02 ಲೀಟರ ನ ಪ್ಲಾಸ್ಟಿಕ 02 ಪ್ಲಾಸ್ಟಿಕ ಬಾಟಲಗಳು ಇರುವ ಸುಮಾರು 04 ಲೀಟರಷ್ಟು ಕಳ್ಳಬಟ್ಟಿ ಸಾರಾಯಿಯನ್ನು ಜಪ್ತಿ ಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗಾಗಿ 180 ಎಂ ಎಲ್ ನಷ್ಟು ಕ ಬ ಸಾರಾಯಿಯನ್ನು ಶಾಂಪಲ ಪಡೆದುಕೊಂಡು ನನ್ನ ಸಹಿ ಮತ್ತು ಚೀಟಿ ಅಂಟಿಸಿ ಪಂಚನಾಮೆಯನ್ನು 07-20 ರಿಂದ

08-20 ರವರೆಗೆ ಜರುಗಿಸಿ ನಿಪಿ-1 ರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ .

ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಪಾಟೀ ಸವಾಲುಃ ಇಲ್ಲಾ .**

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ